ದಿನಾಂಕಃ 01-07-2022 ರಂದು ಪ್ರಮಾಣ ವಚನ ಭೋದಿಸಲಾಯಿತುಃ

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ ಃ**

ನಾನು 5 ದಾವಾ ಸ್ವತ್ತುಗಳ ಮೇಲೆ ದಾವೆಯನ್ನು ಸಲ್ಲಿಸಿರುತ್ತೇನೆ. ಅವುಗಳ ಸ.ನಂ. ಹಾಗೂ ವಿಸ್ತೀರ್ಣವನ್ನು ಹೇಳಲು ಬರುವುದಿಲ್ಲ , ನಾನು ವಿದ್ಯೆ ಕಲಿತಿಲ್ಲ. ನಾನು ದಾವೆಯನ್ನು ನನ್ನ ತಾತನ ವಿರುದ್ದ ಸಲ್ಲಿಸಿರುತ್ತೇನೆ. ನನ್ನ ತಾತನ ಹೆಸರು ಸಾದಪ್ಪ, ನಾನು ಈ ದಾವೆಯನ್ನು ಜಮೀನು ಬರಲಿ ಎಂದು ಸಲ್ಲಿಸಿರುತ್ತೇನೆ. ದಾವಾ ಸ್ವತ್ತುಗಳನ್ನು ನನ್ನ ತಾತ ಸಂಪಾದಿಸಿರುತ್ತಾರೆ. ನನ್ನ ತಂದೆಗೆ ನನ್ನ ತಾತ ಮಾಡಿಕೊಟ್ಟ ಕಾರಣ ನನ್ನ ತಂದೆಗೆ ಬಂದಿರುತ್ತದೆ. ನನ್ನ ತಂದೆಗೆ ದಾವಾ ಸ್ವತ್ತನ್ನು ಯಾವ ರೀತಿ ಮಾಡಿಕೊಟ್ಟಿರುತ್ತಾರೆ ಎಂದರೆ ನಾನು ಓ ದಿಲ್ಲ. ನನ್ನ ತಂದೆ ಚಿಕ್ಕವೆಂಕಟಪ್ಪರವರು ಎಂದರೆ ಹೌದು. ನನ್ನ ತಂದೆ ಬದುಕಿದ್ದ ಕಾಲಕ್ಕೆ ದಾವಾ ಸ್ವತ್ತಿನ ಬಗ್ಗೆ ಏನೇನು ವ್ಯವಹಾರ ಮಾಡಿರುತ್ತಾರೆ ಎಂದು ಗೊತ್ತಿದೆಯಾ ಎಂದರೆ ಇಲ್ಲ. ಸ.ನಂ 69 ಮತ್ತು ಐಟಂ ನಂ. 1, 2 ಮತ್ತು 4 ಸ್ವತ್ತುಗಳನ್ನು 2 ಮತ್ತು 3ನೇ ಪ್ರತಿವಾದಿಗಳಿಗೆ ದಿಃ 03.03.1988ರಲ್ಲಿ ರಿಜಿಸ್ಟರ್ ವಿಲ್ ಅನ್ನು ನನ್ನ ತಂದೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ 1 , 2 ಮತ್ತು 4 ಸ್ವತ್ತುಗಳನ್ನು ನನ್ನ ತಂದೆ 1951ರಲ್ಲಿ ಯೂಸ್‌ಫ್ ಖಾನ್ ಮತ್ತು ಅಹಮ್ಮದ್ ಖಾನ್‌ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಸದರಿ ಸ್ವತ್ತುಗಳು ನನ್ನ ತಾತನವರದ್ದು ಎನ್ನುತ್ತಾರೆ. ದಾವಾ ಐಟಂ ನಂ. 5ನೇ ಸ್ವತ್ತನ್ನು 1ನೇ ಪ್ರತಿವಾದಿಯು ಮುನಿವೀರಪ್ಪರವರಿಂದ ದಿಃ 30.12.1994ರಂದು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ, ಆದ ಕಾರಣ 1ನೇ

ಪ್ರತಿವಾದಿಗೆ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ , ಅದು ನನ್ನ ತಾತ ಮತ್ತು ತಂದೆಯದ್ದು ಎನ್ನುತ್ತಾರೆ. ದಾವಾ 5ನೇ ಸ್ವತ್ತು ನನ್ನ ತಂದೆ ಹಾಗೂ ತಾತನಿಗೆ ಸೇರಿದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೀರಾ? ಎಂದರೆ ನನಗೆ ತಿಳಿಯುವುದಿಲ್ಲ ಎನ್ನುತ್ತಾರೆ.

ದಾವಾ 5ನೇ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಆದ ಕಾರಣ ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಮಾರಾಟಗಳು ಆಗಿದ್ದು , ವಿಲ್ ಆಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ, ಭಾಗ ಇಲ್ಲದೆ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ.ಹೇ ಕೇ ಸರಿ ಇದೆ.

**(ಲತಾದೇವಿ ಜಿ.ಎ)**
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.